ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ, ಮಡಿಕೇರಿ.

**ಒ.ಎಸ್.ನಂ:1/2022**

ಪಿಡಬ್ಲ್ಯು: -1

<u>ದಿನಾಂಕ: 25.01.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲು: ಪ್ರತಿವಾದಿಯ ಪರ ಶ್ರೀ. ಕೆ ಎಂ ಕೆ ವಕೀಲರಿಂದ:-</u>

30. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಯಿತು. ಸದರಿ ದಾಖಲೆಯು ಸರ್ವೆ ನಂಬರ್ 120/7, 121/2, 3 ರ ನಕಾಶೆ ಎಂದರೆ ಸಾಕ್ಷಿ ಸರಿ ಎಂದು ಒಪ್ಪಿರುತ್ತಾರೆ. ಸಾಕ್ಷಿ ಒಪ್ಪಿದ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಯಿತು. ಸದರಿ ದಾಖಲೆಯು ಸರ್ವೆ ನಂಬರ್ 120/4 ರ ಎಂ ಆರ್ ನಂಬರ್ ಟಿ 163 ರ ಮ್ಯುಟೇಷನ್ ಎಂದರೆ ಸಾಕ್ಷಿ ಸರಿ ಎಂದು ಒಪ್ಪಿರುತ್ತಾರೆ. ಸಾಕ್ಷಿ ಒಪ್ಪಿದ ದಾಖಲೆಯನ್ನು ನಿಡಿ-2 ಎಂದು ಗುರುತಿಸಲಾಯಿತು. ಸರ್ವೆ ನಂಬರ್ 120/4 ಪ್ರತಿವಾದಿಗೆ ಸೇರಿದ ಆಸ್ತಿಯಾಗಿದೆ. ನಿಡಿ-1 ನಕಾಶೆಯಲ್ಲಿ ಕಾಣುವ ಸರ್ವೆನಂಬರ್ 120/4 ರ ಆಸ್ತಿಯಲ್ಲಿ ರಸ್ತೆ ಇರುವ ಬಗ್ಗೆ ಕಾಣುವುದಿಲ್ಲ ಎಂದರೆ ಸಾಕ್ಷಿ ಅದರಲ್ಲಿ ರಸ್ತೆ ಇಲ್ಲ ಎಂದು, ಸದರಿ ಸರ್ವೆ ನಂಬರಿನ ಹೊರಗೆ ರಸ್ತೆ ಇದೆ ಎಂದು ನುಡಿಯುತ್ತಾರೆ.

31. ನಿಪಿ-1 ವಿಭಾಗ ಪತ್ರ ಆದ ನಂತರ ಸರ್ವೆ ನಂಬರ್ 120/4 ದುರಸ್ಥಿಯಾಗಿದೆ ಎಂದರೆ ಸರಿ. ಸರ್ವೆ ನಂಬರ್ 120/4 ರಲ್ಲಿ ರಸ್ತೆ ಇದ್ದಿದ್ದರೆ ದುರಸ್ಥಿ ಮಾಡುವ ಸಮಯದಲ್ಲಿ ಸದರಿ ರಸ್ತೆಯನ್ನು ತೋರಿಸಿ ನಕಾಶೆ ಮಾಡುತ್ತಿದ್ದರು ಎಂದರೆ ಸಾಕ್ಷಿ ವಿಭಾಗ ಪತ್ರದ ನಕಾಶೆಯಲ್ಲಿ ರಸ್ತೆಯನ್ನು ತೋರಿಸಿದ್ದಾರೆ ಎಂದು ನುಡಿಯುತ್ತಾರೆ. ಯಾವ ವಿಭಾಗ ಪತ್ರದ ನಕಾಶೆ ತಯಾರಿಸುವಾಗ ರಸ್ತೆ ಇರುವ ಬಗ್ಗೆ ತೋರಿಸಿದ್ದಾರೆ ಎಂದರೆ ನಿಡಿ-1 ವಿಭಾಗ ಪತ್ರದ ಸಮಯದಲ್ಲಿ ಬರೆದ ನಕಾಶೆಯಲ್ಲಿ ತೋರಿಸಲಾಗಿದೆ. ನಿಪಿ-1 ದಾಖಲೆಗೆ

ಯಾವುದೇ ನಕಾಶೆಯನ್ನು ಅಳವಡಿಸಿಲ್ಲ ಎಂದರೆ ಸಾಕ್ಷಿ ನಿಪಿ-2 ನಕಾಶೆ ಬರೆಯಲಾಗಿದೆ ಎಂದು ನುಡಿಯುತ್ತಾರೆ. ನಿಪಿ-2 ರ ದಾಖಲೆಗೆ ಸಬ್ ರಿಜಿಸ್ಟ್ರಾರ್ ರವರ ಸಹಿಯಾಗಲಿ, ಸೀಲಾಗಲಿ ಇಲ್ಲಎಂದರೆ ಸಾಕ್ಷಿ ನಿಪಿ-1 ನೋಂದಣಿ ಆಗುವ ಸಮಯಕ್ಕೆ ಅದನ್ನು ತಯಾರಿಸಿದ್ದೇವೆ ಎಂದು ನುಡಿಯುತ್ತಾರೆ.

32. ನಾನು ನನ್ನ ಸಾಕ್ಷ್ಯ ಪ್ರಮಾಣ ಪತ್ರದ ಕಂಡಿಕೆ 7 ರಲ್ಲಿ ನಕಾಶೆಯಲ್ಲಿ ತೋರಿಸಿದ ಬಂಡಿ ದಾರಿಯಿಂದ ಪೂರ್ವಕ್ಕ ಈ ಉಪಯೋಗಿಸುವ ರಸ್ತೆ 15 ಅಡಿ ದೂರದಲ್ಲಿ ಇದೆ ಎಂದು ಬರೆಸಿದ್ದೇನೆ ಎಂದರೆ ರಸ್ತೆ ಇರಬಹುದು ಎಂದು ಬರೆಸಿದ್ದೇನೆ. ಈಗ ಇರುವ ರಸ್ತೆ ನನಗೆ ಬುದ್ದಿ ಬಂದಾಗಿನಿಂದ ಅಂದರೆ 60 ವರ್ಷದಿಂದಲೂ ಇದೆ. ನಿಪಿ-2 ನಕಾಶೆ ತಯಾರಿಸುವಾಗ ಸರ್ವೆ ನಂಬರ್ 120/4 ರಲ್ಲಿ ರಸ್ತೆ ಇರುವ ಬಗ್ಗೆ ತೋರಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನಕಾಶೆಯಲ್ಲಿ ತೋರಿಸಿದ ರೀತಿಯಲ್ಲೇ ಹಾಲಿ ರಸ್ತೆ ಇದೆ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ಬಂಡಿ ದಾರಿಯೂ ಇಲ್ಲ ಹಾಗೂ ಅದರಿಂದ 15 ಅಡಿ ದೂರಕ್ಕೆ ಈಗ ಉಪಯೋಗಿಸುವ ರಸ್ತೆಯೂ ಇಲ್ಲ ಎಂದರೆ ಸರಿಯಲ್ಲ. ನಿಪಿ-2 ರ ನಕಾಶೆಯಲ್ಲಿ ಸರ್ವೆ ನಂಬರ್ 120/4 ರಲ್ಲಿ ರಸ್ತೆ ಇರುವ ಬಗ್ಗೆ ತೋರಿಸಿಲ್ಲ ಎಂದರೆ ಸರ್ವೆ ನಂಬರ್ 120/4 ರ ಹೊರಗೆ ಇರುವ ರಸ್ತೆ ಬಗ್ಗೆ ತೋರಿಸಲಾಗಿದೆ ಎಂದು ಸಾಕ್ಷಿ ನುಡಿಯುತ್ತಾರೆ.

33. ನಿಪಿ-1 ವಿಭಾಗ ಪತ್ರದಲ್ಲಿ ತೋರಿಸಿರುವ ಚೆಕ್ಕು ಬಂಧಿ ಸರಿಯಾಗಿದೆ. ನಿಪಿ-1 ವಿಭಾಗ ಪತ್ರದ ಈ ಅನುಸೂಚಿ ಸ್ವತ್ತಿನ ಪುಟ ಸಂಖ್ಯೆ 24 ರಲ್ಲಿ ನನ್ನ ಭಾಗಕ್ಕೆ ಬಂದ ಕ್ರಮ ಸಂಖ್ಯೆ 5 ಮತ್ತು 6 ರ ಸರ್ವೆ ನಂಬರ್ 118/1 ಮತ್ತು ಸರ್ವೆ ನಂಬರ್ 121 ರಲ್ಲಿ ಪೂರ್ವಕ್ಕೆ ಬಂಡಿ ದಾರಿ ಎಂದು ತೋರಿಸಲಾಗಿದೆ ಎಂದರೆ ಸರಿ. ನಿಪಿ-1 ವಿಭಾಗ ಪತ್ರದ ಈ ಅನುಸೂಚಿ ಸ್ವತ್ತಿನ ಪುಟ ಸಂಖ್ಯೆ 23 ರಲ್ಲಿ ಪ್ರತಿವಾದಿಯ ಭಾಗಕ್ಕೆ ಬಂದ ಕ್ರಮ ಸಂಖ್ಯೆ 5 ರ ಸರ್ವೆ ನಂಬರ್ 120/2 ರ ಪಶ್ಚಿಮಕ್ಕೆ ಬಂಡಿ ದಾರಿ ಎಂದು ತೋರಿಸಲಾಗಿದೆ ಎಂದರೆ ಸರಿ. ನಿಪಿ-1 ವಿಭಾಗ ಪತ್ರ ಮಾಡುವಾಗ ಸರ್ವೆ ನಂಬರ್ 120/4 ರ ಒಳಗೆ ಬಂಡಿ ದಾರಿ ಇದ್ದಿದ್ದರೆ ವಿಭಾಗ ಪತ್ರದ ಮೇಲೆ ಹೇಳಿದ ಪುಟ ಸಂಖ್ಯೆ 23 ಮತ್ತು 24 ರಲ್ಲಿ ನನ್ನ ಆಸ್ತಿಯ ಪೂರ್ವಕ್ಕೆ ಮತ್ತು ಪ್ರತಿವಾದಿಯ ಆಸ್ತಿಯ ಪಶ್ಚಿಮಕ್ಕೆ ದಾರಿ

ಎಂದು ತೋರಿಸುವ ಅವಶ್ಯಕತೆಇರಲಿಲ್ಲ ಎಂದರೆ ಸಾಕ್ಷಿ ಈಗಿರುವ ರಸ್ತೆಯನ್ನೇ ಬಂಡಿ ದಾರಿ ಎಂದು ತೋರಿಸಲಾಗಿದೆ ಎಂದು ನುಡಿಯುತ್ತಾರೆ. ಪ್ರತಿವಾದಿಯ ಆಸ್ತಿಯಲ್ಲಿರುವ ರಸ್ತೆಯು ಪ್ರತಿವಾದಿಗೆ ಸೇರಿದ ಖಾಸಗಿ ರಸ್ತೆಯಾಗಿದ್ದು, ನಿಪಿ-1 ವಿಭಾಗ ಪತ್ರದಲ್ಲಿ ಸದರಿ ರಸ್ತೆಯನ್ನು ತೋರಿಸಿಲ್ಲ ಎಂದರೆ ಸದರಿ ರಸ್ತೆಯು ಪ್ರತಿವಾದಿಯ ಖಾಸಗಿ ರಸ್ತೆ ಅಲ್ಲ ಹಾಗೂ ಸದರಿ ರಸ್ತೆಯು ವಿಭಾಗ ಪತ್ರದಲ್ಲಿ ತೋರಿಸಿದ ಬಂಡಿ ರಸ್ತೆಾಗಿದೆ ಎಂದು ಸಾ ಕ್ಷಿ ನುಡಿಯುತ್ತಾರೆ. ನಿಪಿ-1 ವಿಭಾಗ ಪತ್ರ ಮಾಡುವಾಗ ಬಂಡಿ ದಾರಿಯು ಪ್ರತಿವಾದಿಯ ಆಸ್ತಿ ಸರ್ವೆ ನಂಬರ್ 120/4 ರಸ್ತೆ ಇರುವುದೇ ಆಗಿದ್ದರೆ ಆ ರೀತಿ ಪತ್ರದಲ್ಲಿ ತೋರಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ 60 ವರ್ಷದಿಂದಲೂ ಸದರಿ ರಸ್ತೆ ಇದೆ, ಅದೇ ರಸ್ತೆಯನ್ನು ಇಟ್ಟುಕೊಂಡು ವಿಭಾಗ ಪತ್ರವನ್ನು ಮಾಡಿಕೊಂಡಿದ್ದೇವೆ ಎಂದು ನುಡಿಯುತ್ತಾರೆ.

34. ನಿಪಿ-1 ವಿಭಾಗ ಪತ್ರದ ಪುಟ ಸಂಖ್ಯೆ 16, ಕಂಡಿಕೆ 13ರಲ್ಲಿ ತೋರಿಸಿದ ರಸ್ತೆ ನನ್ನ ತಂದೆ ವಾಸ ಇದ್ದ ಮನೆಗೆ ಮಂಗಳೂರಿನಿಂದ ಹೋಗುವ ರಸ್ತೆ ಎಂದರೆ ಸರಿ. ಸದರಿ ರಸ್ತೆಯು ನಿಪಿ-2 ನಕಾಶೆಯ ಉತ್ತರ ದಿಕ್ಕಿನಲ್ಲಿರುವ ಸರ್ವೆ ನಂಬರ್ 120/1 ರಲ್ಲಿ ರಸ್ತೆಯನ್ನು ತೋರಿಸಿದ ರಸ್ತೆ ಎಂದರೆ ಸರಿ. ಸದರಿ ನನ್ನ ತಂದೆಯ ಮನೆಗೆ ಹೋಗುವ ರಸ್ತೆಗೂ ನಾನು ಈ ದಾವಾದಲ್ಲಿ ಹೇಳುವ ರಸ್ತೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಅದೇ ರಸ್ತೆಗೆ ದಾವೆ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ.

35. ನಿಪಿ-1 ವಿಭಾಗ ಪತ್ರದ ಪುಟ ಸಂಖ್ಯೆ 16, ಕಂಡಿಕೆ 13ರಲ್ಲಿ ತೋರಿಸಿದ ರಸ್ತೆ ನನ್ನ ತಂದೆಯ ಮನೆಗೆ ಹೋಗುತ್ತದೆ ಹಾಗೂ ಆ ರಸ್ತೆ ಮತ್ತು ದಾವಾ ರಸ್ತೆ ಒಂದಕ್ಕೊಂದು ಸೇರಿರುವುದು ನಿಪಿ-2 ರಲ್ಲಿ ಕಾಣುವುದಿಲ್ಲ ಎಂದರೆ ಸರಿ. ನನ್ನ ತಂದೆಯ ಮನೆಗೆ ಹೋಗುವ ರಸ್ತೆಯೇ ಬೇರೆ ಹಾಗೂ ನಾನು ಈ ದಾವಾದಲ್ಲಿ ಹೇಳುವ ರಸ್ತೆಯೇ ಬೇರೆ ಎಂದರೆ ಸರಿ. ನಿಪಿ-1 ವಿಭಾಗ ಪತ್ರದ ಪುಟ ಸಂಖ್ಯೆ 16ರ ಕಂಡಿಕೆ 14ರಲ್ಲಿ ತೋರಿಸಿದ ರಸ್ತೆ ನಿಪಿ-2 ನಕಾಶೆಯಲ್ಲಿ ಕಾಣುವುದಿಲ್ಲ ಎಂದರೆ ಸರಿ. ಸದರಿ 14 ರಲ್ಲಿ ತೋರಿಸಿದ ರಸ್ತೆಗೂ ದಾವಾ ರಸ್ತೆಗೂ ಸಂಬಂಧ ಇಲ್ಲ ಎಂದರೆ ಸರಿ.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು, ಆಲಿಸಿ ಮುಂದೂಡಲಾಯಿತು.)

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ. ಎಂ. ಎಫ್. ಸಿ., ಮಡಿಕೇರಿ.**